ಗ್ರಾಮ ಪಂಚಾಯತ್‌ಗಳು ವಾಣಿಜ್ಯ ಬ್ಯಾಂಕುಗಳಲ್ಲಿ ಖಾತೆ ಪ್ರಾರಂಭಿಸುವುದು

2023(2170) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗ್ರಾಮ ಪಂಚಾಯತ್‌ಗಳು ನೇರವಾಗಿ ವಾಣಿಜ್ಯ ಬ್ಯಾಂಕುಗಳಲ್ಲಿ ಖಾತೆ ತೆರೆದು ಖಜಾನೆಯಲ್ಲಿರುವ ಹಣವನ್ನು ವರ್ಗಾಯಿಸಲು ಸರಕಾರ ಆದೇಶ ನೀಡಿದೆಯೇ;

ಆ) ಹೌದಾದಲ್ಲಿ, ಉಡುಪಿ ಜಿಲ್ಲೆಯ ಗ್ರಾಮ ಪಂಚಾಯತ್‌ಗಳಿಗೆ ಹಣವನ್ನು ವರ್ಗಾಯಿಸದೇ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ: ಬಂದಲ್ಲಿ, ಈ ಬಗ್ಗೆ ಸರಕಾರ ಕೈಗೊಂಡ ಕ್ರಮವೇನು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಹೌದು

ಆ) ಹೌದು ಬ್ಯಾಂಕ್ ಖಾತೆಗಳಿಗೆ ಖಜಾನೆಗಳಿಂದ ಹಣ ವರ್ಗಾವಣೆಗೆ ಸಂಬಂಧಿಸಿದಂತೆ ಉದ್ಭವಿಸಿರುವ ಕೆಲವು ತಾಂತ್ರಿಕ ಅಡಚಣೆಗಳನ್ನು ನಿವಾರಿಸಲು ಸರ್ಕಾರದ ಹಂತದಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ.

ಕಳಪೆ ಮಿನರಲ್ ವಾಟರ್ ತಯಾರಿಕಾ ಘಟಕಗಳ ಮೇಲೆ ಕೈಗೊಂಡ ಕ್ರಮ

2024(2077) ಶ್ರೀ ಜಗದೀಶ್ ಶೆಟ್ಟರ್(ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿವಿಧ ಮಿನರಲ್ ವಾಟರ್ ತಯಾರಿಕಾ ಸಂಸ್ಥೆಗಳು ಕಳಪೆ ನೀರನ್ನು ಬಾಟಲಿಗಳಲ್ಲಿ ತುಂಬಿ ಮಾರಾಟ ಮಾಡುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಈ ಮಿನರಲ್ ವಾಟರ್ ತಯಾರಿಕಾ ಸಂಸ್ಥೆಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ;

ಇ) ಈ ಮಿನರಲ್ ವಾಟರ್ ತಯಾರಿಕಾ ಸಂಸ್ಥೆಗಳು ಮಿನರಲ್ ವಾಟರ್ ತಯಾರಿಸಲು ಅನುಸರಿಸುತ್ತಿರುವ ಮಾನದಂಡವೇನು;

ಈ) ಈ ಕಳಪೆ ಮಿನರಲ್ ವಾಟರ್ ತಯಾರಿಕಾ ಸಂಸ್ಥೆಗಳ ಮೇಲೆ ಕಡಿವಾಣ ಹಾಕಲಾಗುವುದೇ?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಹೌದು

ಆ) ಇಂತಹ ಮಿನರಲ್ ವಾಟರ್ ತಯಾರಿಕ ಸಂಸ್ಥೆಗಳ ಮೇಲೆ ಸ್ಥಳೀಯ ಆರೋಗ್ಯ ಪ್ರಾಧಿಕಾರಿಗಳಿಂದ ಆಹಾರ ಕಲಬೆರಕೆ ತಡೆ ನಿಯಮಾನುಸಾರ ಕ್ರಮ ತೆಗೆದುಕೊಂಡು ಅಂತಹ ತಯಾರಿಕ ಸಂಸ್ಥೆಗಳನ್ನು ಮುಚ್ಚಿಸಲಾಗಿದೆ.

ಇ) ಕೇಂದ್ರ ಸರ್ಕಾರದ ಆದೇಶದಂತೆ ಆಹಾರ ಕಲಬೆರಕೆ ತಡೆ ನಿಯಮಾವಳಿಗಳ ಅಡಿಯಲ್ಲಿ ಈ ಮಿನರಲ್ ವಾಟರ್ ತಯಾರಿಕಾ ಸಂಸ್ಥೆಗಳು ISI ಸರ್ಟಿಫಿಕೇಶನ್ ಪಡೆಯುವುದನ್ನು ಅಧಿಸೂಚನೆಯ ಮೂಲಕ ಕಡ್ಡಾಯ ಮಾಡಲಾಗಿದೆ.

ಈ) ಇಂತಹ ಮಿನರಲ್ ವಾಟರ್ ತಯಾರಿಕಾ ಸಂಸ್ಥೆಗಳು ಆಹಾರ ಕಲಬೆರಕೆ ತಡೆ ಕಾಯಿದೆ ನಿಯಮಾನುಸಾರ ಪಾಲಿಸುವುದು ಮತ್ತು ISI ಸರ್ಟಿಫಿಕೇಟ್ ಪಡೆಯುವುದನ್ನು ಕಡ್ಡಾಯ ಮಾಡಲಾಗಿದೆ. ಸದರಿ ಕಾಯಿದೆಯನ್ನು ಜಾರಿಗೊಳಿಸುವ ಅಧಿಕಾರವನ್ನು ಸ್ಥಳೀಯ ಆರೋಗ್ಯ ಪ್ರಾಧಿಕಾರಗಳಿಗೆ ನೀಡಲಾಗಿದೆ.

ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯ ಯೋಜನೆಗಳು

2025(2172) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 2002-2003ನೇ ಸಾಲಿನಲ್ಲಿ ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯು ವಿವಿಧ ಯೋಜನೆಯಡಿ ನಿರ್ಮಾಣ ಮಾಡಿರುವ ಮನೆಗಳ ಸಂಖ್ಯೆ ಎಷ್ಟು; (ಯೋಜನೆವಾರು ವಿವರಗಳನ್ನು ನೀಡುವುದು);

ಆ) ನಿರ್ಮಾಣವಾಗಿರುವ ಮನೆಗಳನ್ನು ಈವರೆಗೆ ಎಷ್ಟು ಜನರಿಗೆ ಹಂಚಲಾಗಿದೆ; (ವಿವರಗಳನ್ನು ನೀಡುವುದು)

ಇ) ರಾಜ್ಯದ ಪ್ರತಿಯೊಂದು ವಿಧಾನಸಭಾ ಕ್ಷೇತ್ರಕ್ಕೆ ಮಂಜೂರು ಮಾಡಿರುವ ಮನೆಗಳ ಸಂಖ್ಯೆ ಎಷ್ಟು;

ಈ) ಮನೆಗಳನ್ನು ಮಂಜೂರು ಮಾಡುವಾಗ ಅನುಸರಿಸುವ ಮಾನದಂಡವೇನು?

ಶ್ರೀ ಸಿ.ಆರ್. ಸಗೀರ್ ಅಹಮದ್ (ವಸತಿ ಸಚಿವರು):

ಅ) ರಾಜ್ಯದಲ್ಲಿ ಘೋಷಿತ ಕೊಳಚೆ ಪ್ರದೇಶದಲ್ಲಿ ವಾಸವಾಗಿರುವ ಕೊಳಚೆ ನಿವಾಸಿಗಳಿಗೆ 2002-03 ರಲ್ಲಿ ಈ ಕೆಳಕಂಡ ಯೋಜನೆಗಳಡಿ ಒಟ್ಟು 8249 ಮನೆಗಳನ್ನು ನಿರ್ಮಿಸಲಾಗಿದೆ.

1. ಹುಡ್ಕೋ ಯೋಜನೆಯಡಿ - 1950 ಮನೆಗಳು
2. ವಾಂಬೇ ಯೋಜನೆಯಡಿ - 6299 ಮನೆಗಳು

ಆ) ಹುಡ್ಕೋ ಯೋಜನೆಯಡಿ ನಿರ್ಮಿಸಿರುವ 765 ಮತ್ತು ವಾಂಬೆ ಯೋಜನೆಯಡಿಯ 6299 ಮನೆಗಳ ಹಂಚಿಕೆಗೆ ಮಂಡಳಿ ಸಭೆಯ ಅನುಮೋದನೆ ದೊರೆತಿದ್ದು, ಮನೆಗಳ ಹಂಚಿಕೆಯ ಪ್ರಕ್ರಿಯೆಯು ಪ್ರಗತಿಯಲ್ಲಿದ್ದು, ಮಾರ್ಚ್ 2003ರ ಅಂತ್ಯದ ಒಳಗೆ ಮನೆಗಳನ್ನು ವಿತರಿಸಲು ಉದ್ದೇಶಿಸಲಾಗಿದೆ.

ಇ) ಹುಡ್ಕೋ ಯೋಜನೆಯಡಿ ಮಂಜೂರು ಮಾಡಿರುವ ವಿಧಾನಸಭಾ ಕ್ಷೇತ್ರವಾರು ಮನೆಗಳ ವಿವರಗಳನ್ನು ಅನುಬಂಧ "ಅ" ನಲ್ಲಿ ಮತ್ತು ವಾಂಬೆ ಯೋಜನೆಯಡಿ ಮಂಜೂರು ಮಾಡಿರುವ (ಬೆಂಗಳೂರು ನಗರದಲ್ಲಿ ವಿಧಾನಸಭಾ ಕ್ಷೇತ್ರವಾರು ಮತ್ತು ಇತರೆಡೆ ಪ್ರಥಮ ದರ್ಜೆ 19 ನಗರಗಳ ಜಿಲ್ಲಾವಾರು) ವಿವರಗಳನ್ನು ಅನುಬಂಧ- "ಆ" ನಲ್ಲಿ ಒದಗಿಸಿದೆ.

ಈ) ಮಂಡಳಿಯು ಮನೆಗಳನ್ನು ಮಂಜೂರು ಮಾಡುವಾಗ ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಲಾಗುವುದು.

1. ಕೊಳಚೆ ಪ್ರದೇಶಗಳ ಅಧಿಕೃತ ವಾಸಿಗಳಿಗೆ ಮಾತ್ರ ಮನೆಗಳನ್ನು ನೀಡಲಾಗುವುದು.
2. ಸಾಧ್ಯವಾದಷ್ಟು ಮಟ್ಟಿಗೆ ಅದೇ ಜಾಗದಲ್ಲಿ ಮನೆಗಳನ್ನು ನಿರ್ಮಿಸಿ ಹಂಚಿಕೆ ಮಾಡಲಾಗುವುದು.